INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -03,May-June, 2026
Page No,65-74
Peer -Reviewed, Refereed Journal

# ಮೈಸೂರು ಸಂಸ್ಥಾನದಲ್ಲಿ ಆಧುನೀಕರಣ ಪ್ರಕ್ರಿಯೆ ಮತ್ತು ಆಡಳಿತಾತ್ಮಕ ಸುಧಾರಣೆಗಳು (1881–1947) ಕುರಿತ ಅಧ್ಯಯನ

*ಡಾ. ವಸಂತಕುಮಾರ ಜಿ.ಎಸ್.[1]

**ಸಾರಾಂಶ:** ಬ್ರಿಟಿಷ್ ಪ್ರಭುತ್ವವು 1881ರ ಅನಂತರ ಮೈಸೂರು ಸಂಸ್ಥಾನಕ್ಕೆ ಅಧಿಕಾರವನ್ನು ಒಪ್ಪಿಸಿದ ಮೇಲೆ ಇದು ಇಡೀ ಭಾರತ ದೇಶದ ಪ್ರಮುಖ ಆಧುನಿಕ ಸಂಸ್ಥಾನಗಳಲ್ಲಿ ಒಂದಾಗಿ ತನ್ನದೇ ಆದಂತಹ ಬೆಳವಣಿಗೆಯ ಹಾದಿಯನ್ನು ಕಂಡಿರುತ್ತದೆ. ಮೈಸೂರು ಸಂಸ್ಥಾನದಲ್ಲಿ ಮಹಾರಾಜರಾಗಿದ್ದಂತಹ ಹತ್ತನೆಯ ಚಾಮರಾಜ ಒಡೆಯರ್, ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಅವರ ನೇತೃತ್ವದಲ್ಲಿ ಸಂಸ್ಥಾನದ ಸಮಗ್ರ ಅಭಿವೃದ್ಧಿಗೆ ಕಾರಣರಾದರು. ಇವರ ಆಡಳಿತದ ಅವಧಿಯಲ್ಲಿ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಅವರ ದೂರದೃಷ್ಟಿಯ ಆಡಳಿತದಡಿಯಲ್ಲಿ ಆಧುನಿಕೀಕರಣದ ಮಹತ್ವದ ಹಂತಗಳು ಮುನ್ನಡೆಯಿತು. ಆಡಳಿತ ವ್ಯವಸ್ಥೆಯನ್ನು ಆಧುನಿಕ ಮಾದರಿಯಲ್ಲಿ ಪುನರ್‌ರಚಿಸಿ, ಕಂದಾಯ, ನ್ಯಾಯಾಂಗ, ಪೊಲೀಸ್, ಸಾರ್ವಜನಿಕ ಕಾಮಗಾರಿಗಳು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮಹತ್ತರವಾದ ಸುಧಾರಣೆಗಳನ್ನು ತರಲಾಗಿರುತ್ತದೆ. ಪ್ರಜಾಪ್ರತಿನಿಧಿ ಸಭಾ ಹಾಗೂ ವಿಧಾನ ಪರಿಷತ್ತಿನ ಸ್ಥಾಪನೆಯ ಮೂಲಕ ಜನಪ್ರತಿನಿಧಿತ್ವಕ್ಕೆ ಮಾರ್ಗವೊಂದು ಲಭಿಸಿತು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಗೆ ಅಧಿಕೃತ ಅಧಿಕಾರ ನೀಡುವುದರಿಂದ ಆಡಳಿತ ವಿಕೇಂದ್ರೀಕರಣವೂ ಉತ್ತೇಜಿತವಾಯಿತು. ಆರ್ಥಿಕ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು, ಸಾರಿಗೆ ಸಂಪರ್ಕ ವ್ಯವಸ್ಥೆಯಲ್ಲಿ ರೈಲು ಮಾರ್ಗಗಳ ವಿಸ್ತರಣೆ, ವಿದ್ಯುತ್ ಉತ್ಪಾದನೆ ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾ ಬಂದಿತು. ಅದರಲ್ಲಿಯೂ ವಿಶೇಷವಾಗಿ ಶಿವನಸಮುದ್ರ ಜಲವಿದ್ಯುತ್ ಯೋಜನೆ ಮತ್ತು ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣವೂ ಮೈಸೂರು ಸಂಸ್ಥಾನದ ಆರ್ಥಿಕ ಆಧಾರವನ್ನು ಹೆಚ್ಚು ಗಟ್ಟಿಗೊಳಿಸಿತು. ಶಿಕ್ಷಣ ಕ್ಷೇತ್ರದಲ್ಲಿ ಶಾಲೆಗಳು, ಕಾಲೇಜುಗಳು ಮತ್ತು 1916ರಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯವು ಸಮಗ್ರ ಶೈಕ್ಷಣಿಕ ಬೆಳವಣಿಗೆಗೆ ನೆರವಾಯಿತು. ಸಾಮಾಜಿಕ ಸುಧಾರಣೆಗಳ ಭಾಗವಾಗಿ ಮಹಿಳಾ ಶಿಕ್ಷಣ, ಹಿಂದುಳಿದ ಜನವರ್ಗಗಳ ಕಲ್ಯಾಣ, ಸಾರ್ವಜನಿಕ ಆರೋಗ್ಯ ಮತ್ತು

[1] .ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ, ತುಮಕೂರು ಜಿಲ್ಲೆ.

ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಜಾರಿಗೆ ಬಂದವು. ಈ ಎಲ್ಲಾ ಕ್ರಮಗಳು ಮೈಸೂರನ್ನು ಆಧುನಿಕ, ಪ್ರಗತಿಪರ ಮತ್ತು ಜನಪರ ಆಡಳಿತದ ಮಾದರಿಯ ಸಂಸ್ಥಾನವನ್ನಾಗಿ ರೂಪಿಸಿದವು. ಸ್ವಾತಂತ್ರ್ಯದ ದಾರಿಗೆ ಈ ಸಂಸ್ಥಾನವು ಮಹತ್ವದ ಹಾದಿ ಬೆಳಗಿತು.

**ಪ್ರಧಾನ ಪದಗಳು:** ಆಧುನೀಕರಣ, ಆಡಳಿತಾತ್ಮಕ ಸುಧಾರಣೆಗಳು, 1881ರ ಅನಂತರ ಒಪ್ಪಿಸಿದ ಅಧಿಕಾರ, ಪ್ರಜಾಪ್ರತಿನಿಧಿ ಸಭಾ, ವಿಧಾನ ಪರಿಷತ್ತು, ಸ್ಥಳೀಯ ಸ್ವರಾಜ್ಯ ಸಂಸ್ಥೆಗಳು, ಶಿಕ್ಷಣ ವಿಸ್ತರಣೆ, ಕೈಗಾರಿಕೀಕರಣ, ಜಲವಿದ್ಯುತ್ ಅಭಿವೃದ್ಧಿ, ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ.

**ಪೀಠಿಕೆ:** ಮೈಸೂರು ಸಂಸ್ಥಾನವು ದಕ್ಷಿಣ ಭಾರತದ ಪ್ರಮುಖ ರಾಜಕೀಯ ಮತ್ತು ಆರ್ಥಿಕ ಕೇಂದ್ರವಾಗಿದ್ದು, ತನ್ನ ಪ್ರಗತಿಪರ ಆಡಳಿತ, ಸಾಮಾಜಿಕ ಸುಧಾರಣೆ ಮತ್ತು ಜನಪರ ನೀತಿಗಳ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದಿತು. ಬ್ರಿಟಿಷ್ ಪ್ರಭುತ್ವವು 1831 ರಿಂದ 1881ರವರೆಗೆ ಕಮಿಷನರ್‌ಗಳ ನೇರ ಆಡಳಿತದಲ್ಲಿದ್ದ ಮೈಸೂರು ಸಂಸ್ಥಾನವು 1881ರ ಒಪ್ಪಂದದ ಮೂಲಕ ಒಡೆಯರ್ ವಂಶದ ಮಹಾರಾಜರಿಗೆ ಹಸ್ತಾಂತರಗೊಂಡಿತು. ಈ ಸಮಯವನ್ನು **ಮೈಸೂರಿನ ಸುವರ್ಣಯುಗ** ಎಂದು ಪರಿಗಣಿಸಲಾಗುತ್ತದೆ. 1881 ರಿಂದ 1947ರವರೆಗೆ ಹತ್ತನೆಯ ಚಾಮರಾಜ ಒಡೆಯರ್, ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜೇಂದ್ರ ಒಡೆಯರ್ ಅವರ ಆಡಳಿತವು ರೂಪುಗೊಂಡಿತ್ತು. ಹಾಗೆಯೇ ಕೆ.ಶೇಷಾದ್ರಿ ಅಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರಂತಹ ದಿವಾನರ ದಕ್ಷ ನಾಯಕತ್ವದಡಿಯಲ್ಲಿ ಮೈಸೂರು ಸಂಸ್ಥಾನವು ಆಧುನಿಕೀಕರಣದ ಮಹತ್ವದ ಹಂತಗಳನ್ನು ತಲುಪಿತು. ಆಧುನಿಕ ಆಡಳಿತ ವ್ಯವಸ್ಥೆ, ಕಂದಾಯ, ನ್ಯಾಯಾಂಗ, ಪೊಲೀಸ್, ಸಾರ್ವಜನಿಕ ಕಾಮಗಾರಿಗಳು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಸುಧಾರಣೆಗಳೊಂದಿಗೆ, ಪ್ರಜಾಪ್ರತಿನಿಧಿ ಸಭಾ ಮತ್ತು ವಿಧಾನ ಪರಿಷತ್ ಸ್ಥಾಪನೆಯ ಮೂಲಕ ಪ್ರಜಾಪ್ರತಿನಿಧಿತ್ವಕ್ಕೆ ಮಾರ್ಗವೂ ದೊರೆಕಿತು. ಸ್ಥಳೀಯ ಸ್ವರಾಜ್ಯಕ್ಕೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಆಡಳಿತ ವಿಕೇಂದ್ರೀಕರಣವಾಗಿರುತ್ತದೆ. ಆರ್ಥಿಕವಾಗಿ, ನೀರಾವರಿ ಯೋಜನೆಗಳು, ರೈಲು ಮತ್ತು ರಸ್ತೆ ಜಾಲಗಳ ವಿಸ್ತರಣೆ, ಶಿವನಸಮುದ್ರ ಜಲವಿದ್ಯುತ್ ಉತ್ಪಾದನೆ, ಕೃಷ್ಣರಾಜ ಸಾಗರ ಅಣೆಕಟ್ಟು, ಭದ್ರಾವತಿ ಉಕ್ಕಿನ ಕಾರ್ಖಾನೆ, ಸ್ಯಾಂಡಲ್ ಸೋಪ್ ಕಾರ್ಖಾನೆಗಳು ಮೈಸೂರನ್ನು ಆರ್ಥಿಕತೆಯತ್ತ ಕೊಂಡೊಯ್ಯಿತು. ಶಿಕ್ಷಣದಲ್ಲಿ ಶಾಲೆಗಳು, ಕಾಲೇಜುಗಳು ಮತ್ತು 1916ರಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯವು ಇಡೀ ಭಾರತ ದೇಶದಲ್ಲಿಯೇ ಉನ್ನತ ಶಿಕ್ಷಣದ ಪ್ರಗತಿಗೆ ಕಾರಣವಾಯಿತು. ಸಾಮಾಜಿಕ ಸುಧಾರಣೆಗಳಲ್ಲಿ ಮಹಿಳಾ ಶಿಕ್ಷಣ, ಹಿಂದುಳಿದ ಜನವರ್ಗಗಳ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯದ ನೀತಿಗಳು ಮಹತ್ವ ಹೊಂದಿದವು. ಇತಿಹಾಸಿಕವಾಗಿ ಟಿಪ್ಪು ಸುಲ್ತಾನನ ಆಳ್ವಿಕೆಯ ಅನಂತರ ಬ್ರಿಟಿಷರು ಮೈಸೂರಿನ ನೇರ ಆಡಳಿತವನ್ನು 50 ವರ್ಷಗಳ ಕಾಲ ನಡೆಸಿದರು. ಈ ಅವಧಿಯಲ್ಲಿ ಆಡಳಿತ

ವ್ಯವಸ್ಥೆಯಲ್ಲಿ ಸುಧಾರಣೆಗಳಾದರೂ ಸ್ವಾಯತ್ತತೆ ಕಡಿಮೆಯಿತ್ತು. 1881ರಲ್ಲಿ ಒಪ್ಪಂದದ ಅನಂತರ ಒಡೆಯರ್ ವಂಶದ ಆಡಳಿತವು ಪ್ರಾರಂಭವಾಗಿ ಮೈಸೂರು ಸಂಸ್ಥಾನವು ಸ್ವತಂತ್ರತೆ ಮತ್ತು ಪ್ರಗತಿಯ ದಾರಿಯಲ್ಲಿ ಸಾಗಿತು. ಇದು ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಅತ್ಯಂತ ಮಹತ್ವದ ಅಧ್ಯಾಯವಾಗಿದ್ದು, ಸ್ವಾತಂತ್ರ್ಯೋತ್ತರ ರಾಜ್ಯ ನಿರ್ಮಾಣದ ಮೇಲೆ ದೀರ್ಘಕಾಲೀನ ಪರಿಣಾಮ ಬೀರಿದೆ.

**ಆಧುನೀಕರಣದ ಪರಿಕಲ್ಪನೆ:** ವೈಜ್ಞಾನಿಕ ಮತ್ತು ಯೋಜಿತ ಆಡಳಿತ ವ್ಯವಸ್ಥೆ ಪರಿಚಯಿಸಲಾಯಿತು. ಜನಸಹಭಾಗಿತ್ವ ಹೆಚ್ಚಿಸಲು ಪ್ರಜಾಪ್ರತಿನಿಧಿ ಸಭೆ ಹಾಗೂ ವಿಧಾನ ಪರಿಷತ್ತನ್ನು ಸ್ಥಾಪಿಸಲಾಯಿತು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು. ಶಾಲೆಗಳು, ಕಾಲೇಜುಗಳು ವಿಸ್ತಾರಗೊಂಡು, 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಯಿತು. ಮಹಿಳಾ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಯಿತು. ನೀರಾವರಿ ಯೋಜನೆಗಳು, ರೈಲು ಮತ್ತು ರಸ್ತೆ ಜಾಲ ವಿಸ್ತರಣೆ, ಶಿವನಸಮುದ್ರದ ಜಲವಿದ್ಯುತ್, ಭದ್ರಾವತಿಯ ಉಕ್ಕಿನ ಕಾರ್ಖಾನೆ, ಸ್ಯಾಂಡಲ್ ಸೋಪ್ ಕಾರ್ಖಾನೆಗಳ ಸ್ಥಾಪನೆಯ ಮೂಲಕ ಆರ್ಥಿಕ ಪ್ರಗತಿ ಸಾಧಿಸಲಾಯಿತು. ಹಿಂದುಳಿದ ಜನವರ್ಗಗಳ ಕಲ್ಯಾಣ, ಮಹಿಳಾ ಹಕ್ಕುಗಳು, ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ನ್ಯಾಯದ ನೀತಿಗಳು ಜಾರಿಗೆ ಬಂದವು. ಪ್ರಜಾಪ್ರತಿನಿಧಿತ್ವದ ಬೆಳವಣಿಗೆ, ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ಹೋರಾಟಗಳು ನಡೆಯಿತು. ಮೈಸೂರು ಸಂಸ್ಥಾನದ ಆಧುನೀಕರಣವು ಕೇವಲ ಆಡಳಿತಾತ್ಮಕ ಬದಲಾವಣೆಗಳೇ ಅಲ್ಲ, ಇದು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಸಮಗ್ರ ಮತ್ತು ಸತತ ಪ್ರಗತಿಯನ್ನು ತರುವ ಪ್ರಕ್ರಿಯೆಯಾಗಿತ್ತು. 1881ರ ಅನಂತರ ಮೈಸೂರು ಸಂಸ್ಥಾನವು ಆಧುನಿಕತೆ, ಜನಪರ ಆಡಳಿತ ಮತ್ತು ಸಮಗ್ರ ಅಭಿವೃದ್ಧಿಯ ಮಾದರಿಯಾಗಿ ಪರಿಣಮಿಸಿತು.

**ಆಡಳಿತಾತ್ಮಕ ಪುನರ್ರಚನೆ:** ಮೈಸೂರು ಸಂಸ್ಥಾನದಲ್ಲಿ ಆಧುನಿಕ ರಾಜ್ಯ ನಿರ್ಮಾಣದಲ್ಲಿ ಆಡಳಿತಾತ್ಮಕ ವ್ಯವಸ್ಥೆ ಪ್ರಮುಖ ಪಾತ್ರ ವಹಿಸಿತು. ಇಲಾಖಾವಾರು ವ್ಯವಸ್ಥೆಯನ್ನು ರೂಪಿಸಿ, ಕಂದಾಯ, ಶಿಕ್ಷಣ, ಆರೋಗ್ಯ, ಪೊಲೀಸ್, ನ್ಯಾಯಾಂಗ ಮತ್ತು ಸಾರ್ವಜನಿಕ ಕಾಮಗಾರಿಗಳ ಕಾರ್ಯಕ್ಷೇತ್ರಗಳನ್ನು ಸ್ಪಷ್ಟೀಕರಿಸಲಾಯಿತು. ದಿವಾನರ ನೇತೃತ್ವದಲ್ಲಿ ಆಡಳಿತವನ್ನು ಕೇಂದ್ರೀಕೃತ ಮತ್ತು ಸಮನ್ವಿತವಾಗಿ ಸಂಘಟಿಸಿ, ಅರ್ಹತೆ ಮತ್ತು ಪರಿಣತಿಗೆ ಆದ್ಯತೆ ನೀಡಲಾಯಿತು. ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಆದ್ಯತೆ ನೀಡಿದ್ದು, ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಿತು. ಮಹಿಳಾ ಶಿಕ್ಷಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳ ಸ್ಥಾಪನೆಗೆ ಪ್ರೋತ್ಸಾಹ ದೊರಕಿತು. 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾಯಿತು, ಇದು ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯ ಬೆಳವಣಿಗೆಗೆ ದಾರಿ ಹೋದಿತು. ಸರ್.ಎಂ.ವಿಶ್ವೇಶ್ವರಯ್ಯ ಅವರ ನೇತೃತ್ವದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ನೀಡಲಾಯಿತು. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸ್ಯಾಂಡಲ್ ಸೋಪ್ ಕಾರ್ಖಾನೆ, ಸಕ್ಕರೆ ಕಾರ್ಖಾನೆಗಳು

ಸ್ಥಾಪನೆಯಾದವು. ಇದರಿಂದ ಉದ್ಯೋಗಾವಕಾಶಗಳು ಹೆಚ್ಚಿದವು ಮತ್ತು ಆರ್ಥಿಕತೆಯು ಕೃಷಿಯಿಂದ ಕೈಗಾರಿಕಾ ಆಧಾರಿತದಾಗಿ ಪರಿವರ್ತಿತವಾಯಿತು. ರಸ್ತೆಗಳು, ರೈಲು ಮಾರ್ಗಗಳು, ಸೇತುವೆಗಳು, ನೀರಾವರಿ ವ್ಯವಸ್ಥೆಗಳು ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಕೃಷ್ಣರಾಜ ಸಾಗರ ಅಣೆಕಟ್ಟು, ಶಿವನಸಮುದ್ರ ಜಲವಿದ್ಯುತ್ ಯೋಜನೆ ಮತ್ತು ರೈಲ್ವೆ ವಿಸ್ತರಣೆಗಳು ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಶಕ್ತಿಶಾಲಿ ಆಧಾರವನ್ನು ಒದಗಿಸಿದವು.

**ಪ್ರಜಾಪ್ರತಿನಿಧಿತ್ವದ ವಿಸ್ತರಣೆ:** ಮೈಸೂರು ಸಂಸ್ಥಾನದಲ್ಲಿ 1881ರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು 1907ರಲ್ಲಿ ವಿಧಾನ ಪರಿಷತ್ತಿನ ಸ್ಥಾಪನೆಯಿಂದ ಜನಪ್ರತಿನಿಧಿಗಳು ಆಡಳಿತದಲ್ಲಿ ಭಾಗವಹಿಸುವ ಅವಕಾಶವೂ ಸಿಕ್ಕಿತು. ನಗರಸಭೆಗಳು, ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳ ಮೂಲಕ ಸ್ಥಳೀಯ ಸ್ವರಾಜ್ಯ ವ್ಯವಸ್ಥೆ ಬಲಪಡಿಸಿ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲಾಯಿತು. ಈ ವ್ಯವಸ್ಥೆಗಳು ಅನಂತರದ ಜವಾಬ್ದಾರಿಯುತ ಸರ್ಕಾರದ ಹಾದಿಯನ್ನು ಸಿದ್ದಪಡಿಸಿದವು. ಸಾಮಾಜಿಕ ನ್ಯಾಯದಲ್ಲಿ ಮಹತ್ವದ ಬೆಳವಣಿಗೆಯಾಗಿದ್ದು, 1918ರ ಮಿಲ್ಲರ್ ಆಯೋಗದ ಶಿಫಾರಸುಗಳ ಆಧಾರದಲ್ಲಿ 1921ರಲ್ಲಿ ಹಿಂದುಳಿದ ಜನವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಜಾರಿಗೊಳಿಸಲಾಯಿತು. ಮಹಿಳೆಯರ ಶಿಕ್ಷಣ, ದಲಿತರ ಮತ್ತು ಹಿಂದುಳಿದ ಜನವರ್ಗಗಳ ಕಲ್ಯಾಣಕ್ಕಾಗಿ ವಿಶೇಷ ಕಾರ್ಯಕ್ರಮಗಳು ರೂಪಿಸಲ್ಪಟ್ಟವು. ಮೈಸೂರು ಸಂಸ್ಥಾನದ ಆಧುನೀಕರಣವು ಪಾಶ್ಚಾತ್ಯ ಮಾದರಿಗಳನ್ನು ಅನುಸರಿಸುವುದರ ಜೊತೆಗೆ, ಸ್ಥಳೀಯ ಅಗತ್ಯತೆಗಳು, ಸಾಮಾಜಿಕ ವಾಸ್ತವತೆ ಮತ್ತು ಜನಕಲ್ಯಾಣದ ವಿಚಾರಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯ ಮಾದರಿಯಾಗಿತ್ತು. ಆಡಳಿತದಲ್ಲಿ ದಕ್ಷತೆ, ಆರ್ಥಿಕ ಯೋಜನೆ, ತಾಂತ್ರಿಕ ಪ್ರಗತಿ, ಶಿಕ್ಷಣ ವಿಸ್ತರಣೆ ಮತ್ತು ಸಾಮಾಜಿಕ ನ್ಯಾಯದ ಸಮನ್ವಯದಿಂದ ಮೈಸೂರು ಸಂಸ್ಥಾನವು ಭಾರತದ ಅತ್ಯಂತ ಪ್ರಗತಿಪರ ಸಂಸ್ಥಾನಗಳಲ್ಲಿ ಒಂದಾಗಿ ಗುರುತಿಸಿಕೊಂಡಿತು.

**ಆಡಳಿತಾತ್ಮಕ ಸುಧಾರಣೆಗಳು:** ಮೈಸೂರು ಸಂಸ್ಥಾನದ ಆಧುನೀಕರಣದಲ್ಲಿ ದಿವಾನರು ಮಹತ್ವದ ಪಾತ್ರ ವಹಿಸಿದರು. ಸರ್.ಕೆ.ಶೇಷಾದ್ರಿ ಅಯ್ಯರ್ ಅವರು 1883 ರಿಂದ 1901ರವರೆಗೆ ಮೈಸೂರು ಸಂಸ್ಥಾನದ ಅತ್ಯಂತ ಸಮರ್ಥ ಮತ್ತು ದೂರದೃಷ್ಟಿಯ ದಿವಾನರಲ್ಲಿ ಒಬ್ಬರಾಗಿದ್ದರು. ಇವರು ಮೈಸೂರು ಸಂಸ್ಥಾನದ ಆಧುನೀಕರಣ ಮತ್ತು ಆಡಳಿತಾತ್ಮಕ ಸುಧಾರಣೆಗಳಿಗೆ ಮಹತ್ವದ ಕೊಡುಗೆ ನೀಡಿದರು. ಬ್ರಿಟಿಷ್ ಪ್ರಭುತ್ವವು ಅಧಿಕಾರವನ್ನು ಮೈಸೂರು ಸಂಸ್ಥಾನಕ್ಕೆ ವಹಿಸಿದ ಅನಂತರ ಆಡಳಿತವನ್ನು ಪುನರ್ವ್ಯವಸ್ಥಿತಗೊಳಿಸುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು. ಅವರ ಆಡಳಿತಾವಧಿಯಲ್ಲಿ ಕಂದಾಯ, ನ್ಯಾಯಾಂಗ ಮತ್ತು ಸಾರ್ವಜನಿಕ ಕಾಮಗಾರಿಗಳ ಇಲಾಖೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲಾಯಿತು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರಸ್ತೆ, ಸೇತುವೆ ಹಾಗೂ ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಯಿತು. ಕೃಷಿಯ ಅಭಿವೃದ್ಧಿಗಾಗಿ ನೀರಾವರಿ ಯೋಜನೆಗಳನ್ನು

ಕೈಗೆತ್ತಿಕೊಳ್ಳಲಾಯಿತು ಹಾಗೂ ರೈತರ ಹಿತಾಸಕ್ತಿಯನ್ನು ಕಾಪಾಡುವ ಕ್ರಮಗಳನ್ನು ಜಾರಿಗೊಳಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ವಿಸ್ತರಣೆಗೆ ವಿಶೇಷ ಗಮನ ಹರಿಸಲಾಯಿತು. ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ಸಾರ್ವಜನಿಕ ಶಿಕ್ಷಣಕ್ಕೆ ಉತ್ತೇಜನ ನೀಡಲಾಯಿತು. ಮಹಿಳಾ ಶಿಕ್ಷಣಕ್ಕೂ ಪ್ರೋತ್ಸಾಹ ನೀಡುವ ಮೂಲಕ ಸಾಮಾಜಿಕ ಸುಧಾರಣೆಯತ್ತ ಮಹತ್ವದ ಹೆಜ್ಜೆ ಇಡಲಾಯಿತು. ಕೈಗಾರಿಕಾ ಮತ್ತು ತಾಂತ್ರಿಕ ಅಭಿವೃದ್ಧಿಯ ದೃಷ್ಟಿಯಿಂದಲೂ ಅವರ ಆಡಳಿತ ಗಮನಾರ್ಹವಾಗಿದೆ. ಕೋಲಾರ ಚಿನ್ನದ ಗಣಿ ಪ್ರದೇಶದ ಅಭಿವೃದ್ಧಿಗೆ ನೆರವು ನೀಡಲಾಯಿತು. ಇದೇ ಅವಧಿಯಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆಯ ಪರಿಕಲ್ಪನೆ ರೂಪುಗೊಂಡು, ಮೈಸೂರು ಸಂಸ್ಥಾನದಲ್ಲಿ ವಿದ್ಯುತ್ ಉತ್ಪಾದನೆಯ ಆಧುನಿಕ ಯುಗಕ್ಕೆ ಅಡಿಪಾಯ ಹಾಕಲಾಯಿತು. ಜನಪ್ರತಿನಿಧಿತ್ವದ ಬೆಳವಣಿಗೆಗಾಗಿ 1881ರಲ್ಲಿ ಸ್ಥಾಪಿತವಾಗಿದ್ದ ಪ್ರಜಾಪ್ರತಿನಿಧಿ ಸಭೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಯಿತು. ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಪ್ರಯತ್ನಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬಲ ತುಂಬಿದವು.

ಸರ್.ಎಂ.ವಿಶ್ವೇಶ್ವರಯ್ಯ ಅವರು 1912 ರಿಂದ 1918ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿದ ಮಹಾನ್ ಇಂಜಿನಿಯರ್, ಆಡಳಿತಗಾರರಾಗಿದ್ದರು. ಅವರ ಆಡಳಿತಾವಧಿಯು ಮೈಸೂರು ಸಂಸ್ಥಾನದ ಆಧುನೀಕರಣ, ಕೈಗಾರಿಕೀಕರಣ ಮತ್ತು ವೈಜ್ಞಾನಿಕ ಅಭಿವೃದ್ಧಿಯ ಸುವರ್ಣಯುಗವೆಂದು ಪರಿಗಣಿಸಲ್ಪಡುತ್ತದೆ. ಕೈಗಾರಿಕೀಕರಣ ಅಥವಾ ವಿನಾಶ ಎಂಬ ಅವರ ಧ್ಯೇಯವಾಕ್ಯವು ಮೈಸೂರು ಸಂಸ್ಥಾನದ ಅಭಿವೃದ್ಧಿ ನೀತಿಗೆ ಹೊಸ ದಿಕ್ಕನ್ನು ನೀಡಿತು. ವಿಶ್ವೇಶ್ವರಯ್ಯ ಅವರು ಆಡಳಿತದಲ್ಲಿ ದಕ್ಷತೆ, ಶಿಸ್ತು ಮತ್ತು ಯೋಜಿತ ಅಭಿವೃದ್ಧಿಗೆ ಆದ್ಯತೆ ನೀಡಿದರು. ಸರ್ಕಾರಿ ಇಲಾಖೆಗಳ ಕಾರ್ಯನಿರ್ವಹಣೆಯನ್ನು ಸುಧಾರಿಸಿ, ಆಡಳಿತದಲ್ಲಿ ಉತ್ತರದಾಯಿತ್ವ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಕ್ರಮಗಳನ್ನು ಜಾರಿಗೊಳಿಸಿದರು. ಅವರು ಇಜಿಜುಛುಜಟಿಛಿಧಿ ಂಣಜುಣ ಎಂಬ ಪರಿಕಲ್ಪನೆಯನ್ನು ಪರಿಚಯಿಸಿ ಆಡಳಿತ ವ್ಯವಸ್ಥೆಯನ್ನು ಆಧುನಿಕಗೊಳಿಸಿದರು. ಕೃಷ್ಣರಾಜ ಸಾಗರ ಅಣೆಕಟ್ಟು ಯೋಜನೆಯು ಮೈಸೂರು ಸಂಸ್ಥಾನದ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಹೊಸ ಆಯಾಮವನ್ನು ಈ ಕಾಲದಲ್ಲಿ ಕಂಡಿತ್ತು. ಮೈಸೂರು ಸ್ಯಾಂಡಲ್ ಕಾರ್ಖಾನೆ–1916, ಮೈಸೂರು ಬ್ಯಾಂಕ್–1913, ಮೈಸೂರು ಚೇಂಬರ್ ಆಫ್ ಕಾಮರ್ಸ್, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಯೋಜನೆಗೆ ಪ್ರೋತ್ಸಾಹ, ಶಿಕ್ಷಣ ಕ್ಷೇತ್ರದಲ್ಲಿಯೂ ಅವರು ಅಮೂಲ್ಯ ಕೊಡುಗೆ ನೀಡಿದರು. ಅವರ ಪ್ರಯತ್ನಗಳಿಂದ 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಭಾರತದ ಮೊದಲ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿ ಗುರುತಿಸಿಕೊಂಡಿತು. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ವಿಶೇಷ ಉತ್ತೇಜನ ನೀಡಲಾಯಿತು.

ಮಿರ್ಜಾ ಇಸ್ಮಾಯಿಲ್ ಅವರು 1926 ರಿಂದ 1941ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತಾತ್ಮಕ ಕ್ಷೇತ್ರದಲ್ಲಿ ಅವರು ಸರ್ಕಾರಿ ಇಲಾಖೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಹಲವು ಸುಧಾರಣೆಗಳನ್ನು ಜಾರಿಗೊಳಿಸಿದರು. ಜನಸ್ನೇಹಿ ಆಡಳಿತ, ಆರ್ಥಿಕ ಶಿಸ್ತು ಮತ್ತು ಯೋಜಿತ ಅಭಿವೃದ್ಧಿಗೆ ಆದ್ಯತೆ ನೀಡಿದರು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಬಲಪಡಿಸುವ ಮೂಲಕ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಿದರು. ಭದ್ರಾವತಿಯ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಅಭಿವೃದ್ಧಿಗೆ ಉತ್ತೇಜನ ನೀಡಿದರು. ರೇಷ್ಮೆ, ಸಕ್ಕರೆ, ಸಿಮೆಂಟ್, ಕಾಗದ ಹಾಗೂ ಇತರ ಕೈಗಾರಿಕೆಗಳ ವಿಸ್ತರಣೆಗೆ ನೆರವಾದರು. ಕೈಗಾರಿಕೆಗಳ ಬೆಳವಣಿಗೆಯಿಂದ ಉದ್ಯೋಗಾವಕಾಶಗಳು ಹೆಚ್ಚಾಗಿ ಸಂಸ್ಥಾನದ ಆರ್ಥಿಕತೆ ಬಲವತ್ತಾಯಿತು. ನಗರಾಭಿವೃದ್ಧಿ ಕ್ಷೇತ್ರದಲ್ಲಿ ಅವರು ವಿಶೇಷ ಆಸಕ್ತಿ ವಹಿಸಿದರು. ಬೆಂಗಳೂರು ಮತ್ತು ಮೈಸೂರು ನಗರಗಳ ಸೌಂದರ್ಯೀಕರಣ, ರಸ್ತೆ ನಿರ್ಮಾಣ, ಉದ್ಯಾನಗಳ ಅಭಿವೃದ್ಧಿ ಮತ್ತು ಸಾರ್ವಜನಿಕ ಸೌಲಭ್ಯಗಳ ವಿಸ್ತರಣೆಗೆ ಕ್ರಮ ಕೈಗೊಂಡರು. ಬೆಂಗಳೂರಿನ ಆಧುನಿಕ ನಗರ ಯೋಜನೆಗೆ ಅವರ ಕೊಡುಗೆ ಮಹತ್ವದ್ದಾಗಿದೆ. ಈ ಕಾರಣದಿಂದ ಅವರನ್ನು "ನಗರ ನಿರ್ಮಾಪಕ ದಿವಾನ್" ಎಂದು ಸಹ ಕರೆಯಲಾಗುತ್ತದೆ. ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರಗಳಲ್ಲಿಯೂ ಅವರು ಸುಧಾರಣೆಗಳನ್ನು ಜಾರಿಗೊಳಿಸಿದರು. ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಿ ಜನಸೇವೆಗೆ ಹೆಚ್ಚಿನ ಒತ್ತು ನೀಡಿದರು. 1880ರ ದಶಕದಿಂದಲೇ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವಿಸ್ತರಣೆ. 1881ರಲ್ಲಿ ಪ್ರತಿನಿಧಿ ಸಭೆ, 1907ರಲ್ಲಿ ವಿಧಾನ ಪರಿಷತ್ತಿನ ಸ್ಥಾಪನೆ. ಇವು ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ, ಆಡಳಿತದ ಮೇಲ್ವಿಚಾರಣೆ ಸಾಧ್ಯವಾಯಿತು. 1930ರ ಅನಂತರ ರಾಷ್ಟ್ರೀಯ ಚಳವಳಿಯ ಪ್ರಭಾವದಿಂದ ಜವಾಬ್ದಾರಿಯುತ ಸರ್ಕಾರದ ಬೇಡಿಕೆ ಹೆಚ್ಚಿತು. ಮೈಸೂರು ಕಾಂಗ್ರೆಸ್ ಮತ್ತು ಪ್ರಜಾಪಕ್ಷಗಳು ರಾಜಕೀಯ ಸುಧಾರಣೆಗಳಿಗೆ ಒತ್ತಾಯಿಸಿದರು. ಪ್ರಾಥಮಿಕ ಶಾಲೆಗಳ ಸಂಖ್ಯೆ ಹೆಚ್ಚಳ, ಮಹಿಳಾ ಮತ್ತು ಗ್ರಾಮೀಣ ಶಿಕ್ಷಣ ವಿಸ್ತರಣೆ. 1916ರಲ್ಲಿ ಸ್ಥಾಪಿತ ಮೈಸೂರು ವಿಶ್ವವಿದ್ಯಾಲಯವು ಭಾರತದ ಮೊದಲ ಪ್ರಾದೇಶಿಕ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಮೈಸೂರು ಸಂಸ್ಥಾನದ ದಿವಾನರು ಆಡಳಿತದ ವೈಜ್ಞಾನಿಕತೆ, ಯೋಜಿತ ಅಭಿವೃದ್ಧಿ ಮತ್ತು ಸದಚರಿತ್ರೆಯೊಂದಿಗೆ ಸಂಸ್ಥಾನವನ್ನು ಭಾರತದ ಅತ್ಯಂತ ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿ ರೂಪಿಸಲು ಪ್ರಮುಖ ಪಾತ್ರ ವಹಿಸಿದರು.

**ಮೂಲಸೌಕರ್ಯ ಅಭಿವೃದ್ಧಿ:** ಮೈಸೂರು ಸಂಸ್ಥಾನವು ತನ್ನ ವ್ಯಾಪ್ತಿಯಲ್ಲಿ ರೈಲು ಸಂಪರ್ಕವನ್ನು ಸುಧಾರಿಸಲು ಮಹತ್ವದ ಕಾರ್ಯಗಳನ್ನು ಕೈಗೊಂಡಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸುವ ಮೂಲಕ ವಾಣಿಜ್ಯ ಮತ್ತು ವ್ಯವಹಾರಗಳಿಗೆ ಸಹಾಯಕವಾಗಿದೆ. ರೈಲು ಜಾಲ ವಿಸ್ತರಣೆ ಜನರ ಸಂಚಾರ ವ್ಯವಸ್ಥೆಯನ್ನು ಸುಲಭಗೊಳಿಸಿ, ವಾಣಿಜ್ಯ ವೃದ್ಧಿಗೆ ಸಹಾಯಮಾಡಿತು. ಇದರಿಂದ ಆಡಳಿತ ಸಂಬಂಧಿ

ಚಟುವಟಿಕೆಗಳು ಮತ್ತು ಸರಕು ಸಾಗಣೆ ವ್ಯವಸ್ಥೆಗಳ ಗುಣಮಟ್ಟವೂ ಸುಧಾರಣೆಯಾಯಿತು. ರಾಜ್ಯದ ವಿವಿಧ ಭಾಗಗಳನ್ನು ಸಂಪರ್ಕಿಸುವ ಹೊಸ ರಸ್ತೆ ಮಾರ್ಗಗಳು ನಿರ್ಮಿಸಲ್ಪಟ್ಟವು. ಈ ರಸ್ತೆ ಜಾಲವು ಗ್ರಾಮೀಣ ಪ್ರದೇಶಗಳಿಗೂ ನಗರಗಳಿಗೂ ಉತ್ತಮ ಸಂಪರ್ಕ ಕಲ್ಪಿಸಿ, ಜನರ ಜೀವನಮಟ್ಟವನ್ನು ಸುಧಾರಿಸಿತು. ತೆರಿಗೆ ಸಂಗ್ರಹಣೆ, ಆರೋಗ್ಯ ಸೇವೆಗಳು, ಶಿಕ್ಷಣ ಮತ್ತು ವ್ಯಾಪಾರದ ವಿಸ್ತಾರಕ್ಕೆ ಇದು ಪ್ರಮುಖ ಕಾರಣವಾಯಿತು. ಶಿವನಸಮುದ್ರದಲ್ಲಿ ಜಲವಿದ್ಯುತ್ ಯೋಜನೆ ಸ್ಥಾಪನೆಯಾಗಿದ್ದು, ಇದು ಏಷ್ಯಾದ ಪ್ರಮುಖ ಆರಂಭಿಕ ಜಲವಿದ್ಯುತ್ ಯೋಜನೆಗಳಲ್ಲಿ ಒಂದಾಗಿದೆ. ಈ ಯೋಜನೆಯ ಮೂಲಕ ಬೆಂಗಳೂರು ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶಗಳಿಗೆ ವಿದ್ಯುತ್ ಪೂರೈಕೆ ಸಾಧ್ಯವಾಯಿತು. ವಿದ್ಯುತ್ ಶಕ್ತಿ ಕೈಗಾರಿಕೆಗಳ ಅಭಿವೃದ್ಧಿಗೆ, ಗ್ರಾಮೀಣ ಬೆಳಕಿಗೆ ಮತ್ತು ಸಾರ್ವಜನಿಕ ಸೇವೆಗಳ ಸುಧಾರಣೆಗೆ ಮಹತ್ವದ ಕಾರಣವಾಯಿತು. ಮೂಲಸೌಕರ್ಯ ಕ್ಷೇತ್ರದಲ್ಲಿ ರೈಲು, ರಸ್ತೆ ಮತ್ತು ವಿದ್ಯುತ್ ಉತ್ಪಾದನೆಗಳ ಆಧುನೀಕರಣವು ಮೈಸೂರು ಸಂಸ್ಥಾನದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಬಲವಾದ ಹಿತಕರ ಆಗಿತ್ತು. ಈ ಮೂಲಸೌಕರ್ಯಗಳು ವಾಣಿಜ್ಯ, ಕೈಗಾರಿಕೆ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ವಿಸ್ತಾರಕ್ಕೆ ನೆರವಾಯಿತು ಮತ್ತು ಸಂಸ್ಥಾನವನ್ನು ಸಮಗ್ರವಾಗಿ ಪ್ರಗತಿಪರ ರೂಪಕ್ಕೆ ಕೊಂಡೊಯ್ಯಿತು.

**ಸಾಮಾಜಿಕ ಸುಧಾರಣೆಗಳು:** ಮೈಸೂರು ಸಂಸ್ಥಾನವು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಪ್ರಮುಖ ಕ್ರಮಗಳನ್ನು ಕೈಗೊಂಡಿತು. ಹಿಂದುಳಿದ ವರ್ಗಗಳಿಗೆ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಸೇವೆಗಳಲ್ಲಿ ಸಮಾನ ಅವಕಾಶಗಳನ್ನು ನೀಡಲು ವಿಶೇಷ ನೀತಿಗಳನ್ನು ಜಾರಿಗೊಳಿಸಿತು. ಇದು ಸಮಾಜದಲ್ಲಿ ಸಮಾನತೆ ಮತ್ತು ಒಗ್ಗಟ್ಟನ್ನು ಹೆಚ್ಚಿಸಲು ಪ್ರಮುಖ ಹೆಜ್ಜೆಯಾಗಿತ್ತು. 1918ರಲ್ಲಿ ಮಿಲ್ಲರ್ ಆಯೋಗ ಹಿಂದುಳಿದ ವರ್ಗಗಳ ಪ್ರತಿನಿಧಿತ್ವ ಮತ್ತು ಅವರ ಸ್ಥಿತಿಗತಿಗಳನ್ನು ಪರಿಶೀಲಿಸಿ ಶಿಫಾರಸುಗಳನ್ನು ನೀಡಿತು. ಆಯೋಗದ ವರದಿ ಹಿಂದುಳಿದ ವರ್ಗಗಳ ಹಕ್ಕುಗಳು ಹಾಗೂ ಅವರ ಅಭಿವೃದ್ಧಿಗೆ ಗಾತ್ರ ಹಾಕುವಂತೆ ಸರ್ಕಾರಕ್ಕೆ ಮಾರ್ಗದರ್ಶಕವಾಯಿತು. 1921ರಲ್ಲಿ ಮೈಸೂರು ಸರ್ಕಾರವು ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮೀಸಲಾತಿ ನಿಗದಿಪಡಿಸಿತು. ಇದು ಭಾರತದ ಇತಿಹಾಸದಲ್ಲಿ ಅತ್ಯಂತ ಪ್ರಗತಿಪರ ಸಾಮಾಜಿಕ ನ್ಯಾಯ ನೀತಿಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿತು. ಈ ನೀತಿಯು ಬಂಗಾರದ ಸಮಾನತೆ ಮತ್ತು ವಂಚಿತರ ಹಕ್ಕುಗಳ ರಕ್ಷಣೆಗೆ ಪ್ರಮುಖ ಆಧಾರವಾಯಿತು. ಮಹಿಳಾ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಯಿತು. ಆರೋಗ್ಯ ಸೇವೆಗಳ ವಿಸ್ತರಣೆ, ಮಹಿಳೆಯರ ಸಾರ್ವಜನಿಕ ಮತ್ತು ರಾಜಕೀಯ ಜೀವನದಲ್ಲಿ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಮಹಿಳೆಯರ ಸಬಲೀಕರಣದ ಮೂಲಕ ಸಮಾಜದಲ್ಲಿ ಸಮಾನತ್ವ ಮತ್ತು ಪ್ರಗತಿಗೆ ಮಾರ್ಗವಾಗಿ ನಿರ್ಮಿಸಲಾಯಿತು. ಮೈಸೂರು ಸಂಸ್ಥಾನದ ಸಾಮಾಜಿಕ ಸುಧಾರಣೆಗಳು ಹಿಂದುಳಿದ ವರ್ಗಗಳ

ಹಕ್ಕುಗಳು, ಮೀಸಲಾತಿ ನೀತಿ, ಮಹಿಳಾ ಅಭಿವೃದ್ಧಿ ಮತ್ತು ಸಮಾನತೆಯ ದಿಕ್ಕಿನಲ್ಲಿ ಮಹತ್ವದ ಬದಲಾವಣೆಗಳನ್ನು ತಂದುಕೊಟ್ಟವು. ಈ ಕ್ರಮಗಳು ಕರ್ನಾಟಕ ಮತ್ತು ಭಾರತದ ಸಾಮಾಜಿಕ ನ್ಯಾಯ ಚಳುವಳಿಗೆ ಪ್ರೇರಣೆಯಾದವು.

ಮೈಸೂರು ಸಂಸ್ಥಾನವು ಆಡಳಿತ ಮತ್ತು ಪ್ರಜಾಪ್ರಭುತ್ವದ ತತ್ವಗಳನ್ನು ಸಮನ್ವಯಗೊಳಿಸುವ ಮೂಲಕ ವಿಶಿಷ್ಟ ಭೂಮಿಕೆಯನ್ನು ನಿರ್ಮಿಸಿತು. ಒಡೆಯರ್ ವಂಶದ ಮಹಾರಾಜರು ಶಾಶ್ವತ ಶಕ್ತಿಯನ್ನು ಹೊಂದಿದ್ದರು, ಆದರೆ 1881ರ ಒಪ್ಪಂದದ ಬಳಿಕ ಜನಪ್ರತಿನಿಧಿತ್ವದ ಸಂಸ್ಥೆಗಳು ಸ್ಥಾಪಿತವಾಗಿದ್ದು, ಪ್ರತಿನಿಧಿ ಸಭೆ ಮತ್ತು 1907ರಲ್ಲಿ ವಿಧಾನ ಪರಿಷತ್ತಿನ ಮೂಲಕ ಜನರ ಪಾಲ್ಗೊಳ್ಳುವಿಕೆಗೆ ಅಂಗೀಕಾರವಾಯಿತು. ಇದು ಆಡಳಿತವನ್ನು ಹೆಚ್ಚು ಜನಸಾಮಾನ್ಯರ ಹಿತಚಿಂತನೆಯಲ್ಲಿ ನಡೆಸಲು ಸಹಾಯಮಾಡಿತು. ಮೈಸೂರು ಸಂಸ್ಥಾನವು ಸುಸ್ಪಷ್ಟ ಯೋಜನೆಗಳ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸಿತು. ನೀರಾವರಿ, ವಿದ್ಯುತ್, ಕೈಗಾರಿಕೆ ಮತ್ತು ಸಾರಿಗೆ ಕ್ಷೇತ್ರಗಳಲ್ಲಿ ರೂಪುಗೊಂಡ ಯೋಜನೆಗಳು ರಾಜ್ಯದ ಪ್ರಗತಿಗೆ ಬಲವಾದ ಆಧಾರ ನೀಡಿದವು. ಈ ಯೋಜಿತ ಅಭಿವೃದ್ಧಿ ಹಣೆತಿಗೆಯಿಲ್ಲದೆ ಸದೃಢವಾಗಿ ಮುಂದುವರಿದಿತು. ನಗರಸಭೆಗಳು, ತಾಲೂಕು ಮಂಡಳಿಗಳು ಮತ್ತು ಜಿಲ್ಲಾ ಮಂಡಳಿಗಳ ಮೂಲಕ ಸ್ಥಳೀಯ ಆಡಳಿತಕ್ಕಾಗುವ ಅಧಿಕಾರವನ್ನು ವಿಸ್ತರಿಸಿತು. ಇದು ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಾಜ್ಯದ ಮೂಲಭೂತ ಆಡಳಿತದ ಅಂಗವಾಗಿ ರೂಪಿಸಿತು. ಮೈಸೂರು ಮಾದರಿ ಕೇವಲ ರಾಜಶಾಹಿ ಆಡಳಿತವಲ್ಲ, ಪ್ರಜಾಪ್ರಭುತ್ವದ ತತ್ವಗಳನ್ನು ಅಳವಡಿಸಿಕೊಂಡು, ತಾಂತ್ರಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಮನ್ವಯಗೊಳಿಸಿದ ಸಮಗ್ರ ಮಾದರಿಯಾಗಿತ್ತು. ಇದರಿಂದ ಮೈಸೂರು ಸಂಸ್ಥಾನವು ಭಾರತದ ಪ್ರಗತಿಪರ ಸಂಸ್ಥಾನಗಳಲ್ಲೊಂದು ಎಂದು ಗುರುತಿಸಿಕೊಳ್ಳಲ್ಪಟ್ಟಿತು.

ಮೈಸೂರು ಸಂಸ್ಥಾನವು ಆಧುನೀಕರಣದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿದ್ದು, ಆಧುನಿಕ, ಯೋಜಿತ, ಮತ್ತು ಜನಪರ ಆಡಳಿತ ವ್ಯವಸ್ಥೆಯ ಮಾದರಿಯಾಗಿ ಉದ್ಭವಿಸಿತು. ಆದಾಗ್ಯೂ, ಕೆಲವು ಮಿತಿಗಳು ಮತ್ತು ಸವಾಲುಗಳು ಸಹ ಈ ಪ್ರಗತಿಯೊಂದಿಗೆ ನೆಲೆಸಿದ್ದವು. ಮೈಸೂರು ಸಂಸ್ಥಾನದಲ್ಲಿ ಯಥಾರ್ಥವಾದ ಸ್ವಾಯತ್ತ ಮತ್ತು ಪೂರ್ಣ ಜವಾಬ್ದಾರಿಯುತ ಸರ್ಕಾರದ ಅನುಷ್ಠಾನ ಸಾಧ್ಯವಾಗಲಿಲ್ಲ. ಮಹಾರಾಜರ ಮತ್ತು ಬ್ರಿಟಿಷ್ ಪರಮಾಧಿಕಾರಗಳ ನಡುವಿನ ಸಂಯೋಜನೆಯ ಪರಿಣಾಮವಾಗಿ, ಕೆಲವು ನಿರ್ಧಾರಗಳು ಮತ್ತು ಆಡಳಿತ ವ್ಯಾಪ್ತಿಗಳು ನಿರ್ಬಂಧಿತವಾಗಿದ್ದವು. ಇದರಿಂದ ನಿರ್ವಹಣೆಯಲ್ಲಿ ಕೆಲವು ಅಡೆತಡೆಗಳು ಮತ್ತು ಪರಿಣಾಮಕಾರಿತ್ವದ ಕೊರತೆ ಕಂಡುಬಂತು. ಒಡೆಯರ್ ವಂಶದ ರಾಜಮನೆತನವು ಮೈಸೂರಿನ ಆಡಳಿತದಲ್ಲಿ ಪ್ರಬಲ ಸ್ಥಾನವನ್ನು ಕಾಯ್ದುಕೊಂಡಿತ್ತು. ಈ ರಾಜಶಾಹಿ ಪ್ರಭುತ್ವದಿಂದಾಗಿ ಪ್ರಜಾಪ್ರಭುತ್ವದ ವಿಸ್ತಾರಕ್ಕೆ ಮತ್ತು ಜನಸಾಮಾನ್ಯರ ಹಕ್ಕುಗಳ ಸುಧಾರಣೆಗೆ ನಿರಂತರ ತಡೆಗಳು ಬಂದವು.

ರಾಜಮನೆತನದ ಪ್ರಭಾವದ ಕಾರಣದಿಂದಾಗಿ ಕೆಲವು ಆಡಳಿತಾತ್ಮಕ ಮತ್ತು ಸಾಮಾಜಿಕ ಬದಲಾವಣೆಗಳು ನಿಧಾನವಾಗಿ ನಡೆದವು. ಗ್ರಾಮೀಣ ಪ್ರದೇಶಗಳಲ್ಲಿ ಬಡತನವು ಪ್ರಮುಖ ಸಮಸ್ಯೆಯಾಗಿತ್ತು. ಆರ್ಥಿಕ ಅಭಿವೃದ್ಧಿ ಮತ್ತು ಕೈಗಾರಿಕೀಕರಣವು ನಗರ ಪ್ರದೇಶಗಳಿಗೆ ಹೆಚ್ಚಾಗಿ ಸೀಮಿತವಾಗಿದ್ದು, ಗ್ರಾಮೀಣ ಜನತೆಯ ಬಹುಮಾನ ಭಾಗಕ್ಕೆ ತಲುಪಲಿಲ್ಲ. ಬಡತನ, ಅಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಕೊರತೆಗಳು ಗ್ರಾಮೀಣ ಭಾಗಗಳಲ್ಲಿ ಇನ್ನೂ ಉಂಟಾಗಿದ್ದವು.

ಸಾಮಾಜಿಕ ನ್ಯಾಯದ ಹೆಜ್ಜೆಗಳು ಇದ್ದರೂ, ಜಾತಿ ಹಾಗೂ ವರ್ಗ ಆಧಾರದ ಅಸಮಾನತೆಗಳು ಸಂಪೂರ್ಣವಾಗಿ ನಿಗ್ರಹಿಸಲ್ಪಡಲಿಲ್ಲ. ಹಿಂದುಳಿದ ವರ್ಗಗಳ ಮೀಸಲಾತಿ ನೀತಿಗಳು ಜಾರಿಗೊಂಡರೂ, ಸಾಮಾಜಿಕ ಸಮಾನತೆ ಹಾಗೂ ಬಲವರ್ಧನೆಗೆ ಇನ್ನಷ್ಟು ಪ್ರಯತ್ನ ಬೇಕಾಗಿತ್ತು. ಮೈಸೂರು ಸಂಸ್ಥಾನವು ಇತರ ಭಾರತೀಯ ಸಂಸ್ಥಾನಗಳಿಗಿಂತ ಹೆಚ್ಚು ಪ್ರಗತಿಪರ ಮತ್ತು ಜನಪರ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು. ಆದರೂ, ರಾಜಮನೆತನದ ಪ್ರಭಾವ, ಸ್ವಾಯತ್ತತೆಯ ಕೊರತೆ, ಗ್ರಾಮೀಣ ಬಡತನ ಮತ್ತು ಸಾಮಾಜಿಕ ಅಸಮಾನತೆಗಳಂತಹ ಸವಾಲುಗಳನ್ನು ಎದುರಿಸಿತು. ಈ ಎಲ್ಲ ಅಂಶಗಳು ಮೈಸೂರು ಸಂಸ್ಥಾನದ ಆಧುನಿಕೀಕರಣದ ಸಾಧನೆಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತವೆ. ಇದು ಮುಕ್ತಾಯವಾಗಿ, ಸ್ವಾತಂತ್ರ್ಯೋತ್ತರ ಕರ್ನಾಟಕದ ಮತ್ತು ಭಾರತದ ಆಧುನಿಕ ರಾಜ್ಯ ನಿರ್ಮಾಣದ ಪ್ರಕ್ರಿಯೆಗೆ ಮೈಸೂರಿನ ಕೊಡುಗೆ ಮತ್ತು ಬೋಧನೆಗಳ ಮಹತ್ವವನ್ನು ಸ್ಪಷ್ಟಪಡಿಸುತ್ತದೆ.

**ಉಪಸಂಹಾರ:** 1881ರಿಂದ 1947ರವರೆಗಿನ ಅವಧಿಯಲ್ಲಿ ಮೈಸೂರು ಸಂಸ್ಥಾನವು ಭಾರತೀಯ ಸಂಸ್ಥಾನಗಳ ಅಂತರಂಗದಲ್ಲಿ ಒಂದು ಮಾದರಿ ರಾಜ್ಯವಾಗಿ ಹೊರಹೊಮ್ಮಿತು. ಈ ಅವಧಿಯಲ್ಲಿ ಸಂಸ್ಥಾನದಲ್ಲಿ ನಡೆದ ಆಡಳಿತಾತ್ಮಕ ಸುಧಾರಣೆಗಳು, ಪ್ರಜಾಪ್ರತಿನಿಧಿತ್ವದ ವಿಸ್ತರಣೆ ಮತ್ತು ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಸ್ಥಾಪನೆಯಿಂದ ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ಸಿಕ್ಕಿತು. ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕದಿಂದ ಉನ್ನತ ಶಿಕ್ಷಣದ ವಿಸ್ತರಣೆ, ಮಹಿಳಾ ಮತ್ತು ಗ್ರಾಮೀಣ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಲಾಯಿತು. 1916ರಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಪ್ರೇರಣೆ ನೀಡಿತು. ಆರ್ಥಿಕ ಕ್ಷೇತ್ರದಲ್ಲಿ ಕೈಗಾರಿಕೀಕರಣದ ಮೂಲಕ ಉದ್ಯೋಗಾವಕಾಶಗಳು ಸೃಷ್ಟಿಸಲ್ಪಟ್ಟವು. ನೀರಾವರಿ ಯೋಜನೆಗಳು, ಜಲವಿದ್ಯುತ್ ಉತ್ಪಾದನೆ ಮತ್ತು ಮೂಲಸೌಕರ್ಯ ವಿಸ್ತರಣೆ ಸಂಸ್ಥಾನದ ಆರ್ಥಿಕತೆಯನ್ನು ಕೃಷಿ ಆಧಾರಿತದಿಂದ ಕೈಗಾರಿಕಾ ಆಧಾರಿತಕ್ಕೆ ತಿರುಗಿಸಿತು. ಸಾಮಾಜಿಕ ನ್ಯಾಯ ನೀತಿಗಳು, ಹಿಂದುಳಿದ ವರ್ಗಗಳ ಮೀಸಲಾತಿ, ಮಹಿಳಾ ಅಭಿವೃದ್ಧಿ ಮತ್ತು ಆರೋಗ್ಯ ಸೇವೆಗಳ ವಿಸ್ತರಣೆ ಮೂಲಕ ಮೈಸೂರು ಸಂಸ್ಥಾನವು ಸಮಾನತೆ ಮತ್ತು ಸಬಲೀಕರಣದ ದಿಕ್ಕಿನಲ್ಲಿ ಮಹತ್ವಪೂರ್ಣ ಹೆಜ್ಜೆಗಳನ್ನು ಇಟ್ಟಿತು. ಈ ಆಧುನೀಕರಣ ಪ್ರಕ್ರಿಯೆಯ ಫಲವಾಗಿ ಮೈಸೂರು ಸಂಸ್ಥಾನವು ಸ್ವಾತಂತ್ರ್ಯೋತ್ತರ ಕರ್ನಾಟಕ ರಾಜ್ಯದ ಆಡಳಿತ ಮತ್ತು ಅಭಿವೃದ್ಧಿಗೆ

ಭದ್ರವಾದ ಅಡಿಪಾಯವಾಯಿತು. ಮೈಸೂರು ಮಾದರಿಯು ಭಾರತೀಯ ಸಂಸ್ಥಾನಗಳ ಆಧುನೀಕರಣ ಅಧ್ಯಯನದಲ್ಲಿ ಅಮೂಲ್ಯ ಸ್ಥಾನವನ್ನು ಪಡೆದಿದ್ದು, ಆಧುನಿಕ ರಾಜ್ಯ ನಿರ್ಮಾಣದ ಗತಿಯನ್ನು ರೂಪಿಸಲು ಪ್ರಮುಖ ಪ್ರೇರಣೆಯಾಯಿತು. ಮೈಸೂರು ಸಂಸ್ಥಾನದ ಆಧುನೀಕರಣವು ಪ್ರಗತಿಪರ ಮತ್ತು ಜನಪರ ದೃಷ್ಟಿಕೋನದಿಂದ ಭಾರತದಲ್ಲಿ ಪ್ರಗತಿಯ ಮಾದರಿಯಾಗಿದ್ದು, ಅದರ ಅನುಭವಗಳು ಇಂದಿನ ರಾಜ್ಯ ಆಡಳಿತ ಮತ್ತು ಅಭಿವೃದ್ಧಿ ನೀತಿಗಳ ರೂಪುಗೊಳಿಕೆಗೆ ಮಾರ್ಗದರ್ಶಕವಾಗಿದೆ.

**ಆಧಾರ ಗ್ರಂಥಗಳು**


- ಸೂರ್ಯಪ್ರಕಾಶ್, ಮೈಸೂರು ಸಂಸ್ಥಾನದ ಇತಿಹಾಸ, 2010
- ಗೋಪಾಲರಾವ್.ಎಚ್, ಮೈಸೂರು ಸಂಸ್ಥಾನ: ಆಧುನಿಕೀಕರಣ ಮತ್ತು ಅಭಿವೃದ್ಧಿ, 2015
- ರಾಜೇಂದ್ರ.ಬಿ, ಕರ್ನಾಟಕದ ಸಂಸ್ಥಾನಗಳ ಇತಿಹಾಸ, 2008
- ಶ್ರೀಧರ್ ಬಿ.ನಾಗರಾಜ್, ಮೈಸೂರು ರಾಜ್ಯದ ಆಧುನಿಕೀಕರಣ, 2012
- ಮೈಸೂರು ವಿಶ್ವವಿದ್ಯಾನಿಲಯ 1916–2016: ಶತಮಾನೋತ್ಸವ ಸಂಚಿಕೆ, 2016
- ಮೈಸೂರು ಸಂಸ್ಥಾನದ ಆಧುನಿಕೀಕರಣದಲ್ಲಿ ಸರ್.ಎಂ.ವಿಶ್ವೇಶ್ವರಯ್ಯರ ಪಾತ್ರ, 2018